ಪುರುಷೋತ್ತಮನನ್ನು ನೊಣವಾಗಿಸಿ.
ಪಕ್ಷಿಗಳು ಹಾಡಿನ ಮೂಲಕ ತಮ್ಮ ಪ್ರಾರ್ಥನೆ ಸಲ್ಲಿಸಿದವು:
ಪುರುಷೋತ್ತಮನನ್ನು 'ನೊಣ'ವಾಗಿಸಿ.
ಸರ್ಪಗಳೂ ಬುಸುಗುಟ್ಟುತ್ತಾ ಪ್ರಾರ್ಥಿಸಿದವು:
ಪುರುಷೋತ್ತಮನನ್ನು 'ನೊಣ'ವಾಗಿಸಿ.
ಊರಿನ ಸಾಕು ಪ್ರಾಣಿಗಳೂ ದೇವರಲ್ಲಿ ರೋದಿಸುತ್ತಾ ಮೊರೆಯಿಟ್ಟವು:
ಪುರುಷೋತ್ತಮನನ್ನು 'ನೊಣ'ವಾಗಿಸಿ.
ದೇವರು ಕಣ್ಣು ತೆರೆದು ಮುಗುಳ್ನಕ್ಕ.

ನಾರಿನಂತೆ ತೆಳ್ಳಗಿರುವ ಕಾಲುಗಳು, ಹೊಟ್ಟೆಗೆ ಸೇರಿಸಿಕೊಂಡು, ಚಿಕ್ಕ ಚಿಕ್ಕ ರೆಕ್ಕೆಗಳೊಂದಿಗೆ ಪುರುಷೋತ್ತಮ ವಸಂತೆಯ ಮನೆಗೆ ಹಾರಿಬಂದ.

ಎಂದಿನಂತೆ ಗೋಪಾಲ ಮಾಸ್ತರು ಆರಾಮ ಕುರ್ಚಿಯಲ್ಲಿ ಕುಳಿತು ದಿನ ಪತ್ರಿಕೆ ಓದುತ್ತಿದ್ದಾರೆ.

'ಗುಯ್'ಗುಟ್ಟುತ್ತಾ ಒಳಕ್ಕೆ ಹಾರಿ ಹೋದ ಪುರುಷೋತ್ತಮನನ್ನು ಮಾಸ್ತರು ಗಮನಿಸಲೇ ಇಲ್ಲ.

ಪುರುಷೋತ್ತಮ ಹಿಂದಿನ ಬಾಗಿಲಿನಿಂದ ಹೊರಕ್ಕೆ ಬಂದು ಸ್ನಾನದಕೋಣೆಯ ಕಡೆಗೆ ಹಾರಿದ.

ಸ್ನಾನದಕೋಣೆಯೊಳಗಡೆ ಗೋಡೆಯಮೇಲೆ ಅಂಟಿಕೊಂಡು ಕುಳಿತ. ಇಲ್ಲಿ ಕುಳಿತರೆ ಎಲ್ಲಾ ಕಾಣಿಸುತ್ತೆ, ಎಲ್ಲವೂ.

ಢವಢವ ಹೊಡೆದುಕೊಳ್ಳುತ್ತಿದ್ದ ಎದೆ, ದಿಟ್ಟಿಸಿ ನೋಡುತ್ತಿದ್ದ ಕಣ್ಣುಗಳು, ಇವುಗಳೊಂದಿಗೆ ಆತ ವಸಂತ ಬರುವುದನ್ನೆ ಕಾಯುತ್ತಿದ್ದ. ಪುರುಷೋತ್ತಮನಿಗೆ ನಿಮಿಷಗಳು ಯುಗಗಳಂತೆ ಭಾಸವಾಗತೊಡಗಿದವು.

